**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 19.05.2021.

## 1] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 88/2021 ಕಲಂ 188, 269, ಐಪಿಸಿ ಮತ್ತು 87 ಕೆ.ಪಿ ಆಕ್ಟ್

ದಿನಾಂಕ: 18/05/2021 ರಂದು 16-15 ಗಂಟೆಗೆ ಇದರಲ್ಲಿ ಆರೋಪಿತರಾದ 1]ದಸ್ತಗೀರಸಾಬ ಸಾ:ನಾಲತವಾಡ ನಾಡಗೌಡ ಓಣಿ 2] ದಾವಲಸಾಬ ನಾಲತವಾಡ ನಾಡಗೌಡ ಓಣಿ 3] ಶಾಂತಪ್ಪ, ನಾಲತವಾಡ 4] ಹಣಮಂತ ಕನ್ನೂರ ಸಾ: ನಾಲತವಾಡ 5] ರಿಯಾಜ ನಾಲತವಾಡ 6] ವೀರಯ್ಯ ಸಾ: ನಾಲತವಾಡ 7] ತಮ್ಮಣ್ಣ ತಂದೆ. ಸಾ: ಅಯ್ಯನಗುಡಿ 8] ಸೋಮಪ್ಪ ' ಸಾ: ನಾಲತವಾಡ 9] ಚನ್ನಪ್ಪ ತಂದೆ. ' ಸಾ: ನಾಲತವಾಡ 10] ಬಸಪ್ಪ ತಂದೆ. ಸಾ: ನಾಲತವಾಡ 11] ರಾಮಪ್ಪ ಸಾ: ನಾಲತವಾಡ ಆರೋಪಿತರಾದ ನಮೂದಿಸಿದ ಆರೋಪಿತರು ಪ್ರಸ್ತುತ ರಾಜ್ಯ ಸರ್ಕಾರ ಕೋರೋನಾ ವೈರಸ್/ಕೊವಿಡ್-19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಲಾಕ್-ಡೌನ್ ಜಾರಿ ಮಾಡಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೂಡಾ ಕೋರೋನಾ ವೈರಸ್/ಕೊವಿಡ್-19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಮುಂಜಾಗೃತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿ, ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದಾ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಉಲ್ಲಂಘನೆ ಮಾಡಿದ್ದಲ್ಲದೇ, ತಮ್ಮ-ತಮ್ಮ ಪಾಯದೇಗೋಸ್ಕರ ನಾಲತವಾಡ ಪಟ್ಟಣದ ಮೊರಾರ್ಜಿ ದೇಸಾಯಿ ಶಾಲೆ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಇಸ್ಪೇಟ್ ಎಲೆಗಳ ಸಹಾಯದಿಂದ ರೊಕ್ಕ ಹಚ್ಚಿ ಅಂದರ-ಬಾಹರ ಅಂಬುವ ಇಸ್ಪೇಟ್ ಮನ್ನಾ ಜೂಜಾಟವನ್ನು ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಶ್ರೀ ಎಮ್ ಬಿ ಬಿರಾದಾರ ಪಿ.ಎಸ್.ಐ. [ಕಾ:ಸು] ಮುದ್ದೇಬಿಹಾಳ ಪೊಲೀಸ್ ಠಾಣೆ. ರವರು ಪಿರ್ಯಾದಿ ಕೊಟ್ಟಿದ್ದರ ಮೇರೆಗೆ ದಿನಾಂಕ 18.05.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 2] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 87/2021 ಕಲಂ 188,269, 271 ಐಪಿಸಿ & ಕಲಂ 78(3) ಕೆ.ಪಿ ಆ್ಯಕ್ಟ್

ದಿನಾಂಕ: 18.05.2021 ರಂದು 12:30 ಘಂಟೆಗೆ ಮುದ್ದೇಬಿಹಾಳ ಪಟ್ಟಣದ ಬನಶಂಕರಿ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ. ಇದರಲ್ಲಿ ಆರೋಪಿತರಾದ **1]** ವಿಶ್ವನಾಥ ತಂದೆ. ಬಸವರಾಜ ಮುರಳಿ ವಯಾ-28 ವರ್ಷ, ಸಾ: ಮುದ್ದೇಬಿಹಾಳ ಬನಶಂಕರಿ ನಗರ 2] ಮುತ್ತಣ್ಣ ತಂದೆ. ನಿಂಗಪ್ಪ ಹಡಪದ ವಯಾ-35 ವರ್ಷ ಸಾ: ಮುದ್ದೇಬಿಹಾಳ ಬನಶಂಕರಿ ನಗರ ಇಬ್ಬರೂ ಪ್ರಸ್ತುತ ರಾಜ್ಯ ಸರ್ಕಾರ ಕೋರೋನಾ ವೈರಸ್/ಕೊವಿಡ್-19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಲಾಕ್-ಡೌನ್ ಜಾರಿ ಮಾಡಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೂಡಾ ಕೋರೋನಾ ವೈರಸ್/ಕೊವಿಡ್-19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಮುಂಜಾಗೃತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿ, ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದಾ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಉಲ್ಲಂಘನೆ ಮಾಡಿದ್ದಲ್ಲದೇ, ತಮ್ಮ-ತಮ್ಮ ಪಾಯದೇಗೋಸ್ಕರ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓಸಿ ನಂಬರ ಬರೆದುಕೊಟ್ಟು ಕಲ್ಯಾಣ ಮಟಕಾ ಅಂಬುವೆ ಓ.ಸಿ ಜೂಜಾಟವನ್ನು ನಡೆಸುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಶ್ರೀ ಎಮ್. ಬಿ ಬಿರಾದಾರ ಪಿ.ಎಸ್.ಐ (ಕಾಸು) ಮುದ್ದೇಬಿಹಾಳ ಪೊಲೀಸ್ ಠಾಣೆ ರವರು ಪಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 18.05.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 90/2021 ಕಲಂ 269,188.ಐ.ಪಿ.ಸಿ.&87 ಕೆ.ಪಿ ಆ್ಯಕ್ಟ.

ದಿನಾಂಕ:18.05.2021 ರಂದು 1730 ಗಂಟೆಗೆ ಹಳೆಯ ಪಡನೂರ ಗ್ರಾಮದ ಚನ್ನಬಸವೇಶ್ವರ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಇದರಲ್ಲಿ ಆರೋಪಿತರಾದ 1)ಖಾಜೇಸಾಬ ತಂಮ್ಮೈಹಿಬೂಬ ಬಿರಾದಾರ ಸಾ॥ ಹಿರೇರೂಗಿ 2]ಶಿವಾನಂದ ತಂಬಸವರಾಜ ಜವಳಗಿ @ ಬಿರಾದಾರ ಸಾರೋಡಗಿ 3] ಸಂತೋಷ ತಂ ಲಕ್ಷ್ಮಣ ನಿಡೋಣಿ ಸಾ: ಇಂಡಿ ಬೀರಪ್ಪ ನಗರ 4] ಸಿದ್ದನಗೌಡ ತಂ ಗುರನಗೌಡ ಬಿರಾದಾರ ಸಾ: ಇಂಡಿ ಬೀರಪ್ಪ ನಗರ @ ವ್ಯಾಪಕವಾಗಿ ಹರಡುತ್ತಿರುವ ಕರೋನ ವೈರಸ್ [ಕೋವಿಡ್-19] ಸೊಂಕು ತಡೆಗಟ್ಟುವ ಕುರಿತು ದಿನಾಂಕ: 10.05.2021 ರಿಂದ ದಿನಾಂಕ:24.05.2021 ವರೆಗೆ ಕರ್ನಾಟಕಯಾದ್ಯಂತ ಲಾಕ್‌ಡೌನ್ ಜಾರಿಯಲ್ಲಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆಯಾದ್ಯಾಂತ ಕಲಂ:144 ಸಿ ಆರ ಪಿ ಸಿ ಜಾರಿ ಮಾಡಿದ್ದರು ಸಹ ಪ್ರಾಣಕ್ಕೆ ಅಪಾಯಕಾರಿಯಾಗುವ ರೋಗದ ಸೋಂಕುವನ್ನು ಹರಡುವ ಸಂಭವಿರುವ ಇರುತ್ತದೆ ಅಂತಾ ಗೋತ್ತಿದ್ದರು ಸಹ ನಿರ್ಲಕ್ಷ್ಯತನ ಮಾಡಿ ದಿನಾಂಕ:18.05.2021 ರಂದು 1730 ಹಳೆಯ ಪಡನೂರ ಗ್ರಾಮದ ಚನ್ನಬಸವೇಶ್ವರ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಮನ್ನಾ ಜೂಜಾಟವನ್ನು ಆರೋಪಿ ನಂ:1 ರಿಂದ 4 ನೇದವರು ಸಿಕ್ಕಿದ್ದು ಉಳಿದ ಆರೋಪಿತರು ಫರಾರಿ ಆಗಿದ್ದು ಸಿಕ್ಕ ಆರೋಪಿತರ ಕಡೆಯಿಂದ 6100 ರೂಗಳು ಮತ್ತು 52 ಇಸ್ಪೇಟ್ ಎಲೆಗಳ ಸಮೇತ ಸಿಕ್ಕ ಅಪರಾಧ. ಈ ಬಗ್ಗೆ ಶ್ರೀ: ಮಾಳಪ್ಪ ಪುಜಾರಿ ಪಿ ಎಸ್ ಐ ಇಂಡಿ ಗ್ರಾಮೀಣಪೊಲೀಸ ಠಾಣೆ, ವಿಜಯಪುರ ರವರು ವರದಿ ಕೊಟ್ಟ ಮೇರೆಗೆ, ದಿನಾಂಕ: 18.05.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 4] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 48/2021 ಕಲಂ 379 ಐ.ಪಿ.ಸಿ. ಮತ್ತು ಕರ್ನಾಟಕ ಉಪ ಖನಿಜ ರಿಯಾಯತಿ ನಿಯಮಾವಳಿಗಳು 1994 ರ ನಿಯಮ 31 [ಆರ್] ಮತ್ತು 42.

ದಿನಾಂಕ; 18.05.2021 ಮುಂಜಾನೆ 10:00 ಗಂಟೆಗೆ, ಇದರಲ್ಲಿ ಆರೋಪಿತರಾದ 01] ಚಂದ್ರಕಾಂತಾಬಾಯಿ ಗಂಡ ಬಸಲಿಂಗಪ್ಪ ಸಿಂಪಿ [ಪಹಣಿಯಂತೆ]ಮತ್ತು ಮರಳು ದಾಸ್ತಾನು ಮಾಡಿದವರು ಹೆಸರು ವಿಳಾಸ ನಮೂದ ಇರುವದಿಲ್ಲ. ದಿನಾಂಕ: 18.05.2021 ರಂದು ಬೆಳಿಗ್ಗೆ 10 ಗಂಟೆಗೆ ಇಲಾಖೆಯ ವಾಹನದಲ್ಲಿ ಮೇಲೆ ಪ್ರಸ್ತಾಪಿಸಿರುವ ಕೊಂಡಮ ಪ್ರದೇಶಕ್ಕೆ ಬೇಟಿ ನೀಡಿ ಜಂಟಿ ಸ್ಥಳ ಪರಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಭೀಮಾನದಿ ಪಾತ್ರದ ಒಳಗೆ ದಂಡೆಯಲ್ಲಿ ಅನಧೀಕೃತವಾಗಿ ಅಂದಾಜು 120 ಕ್ಯೂಬಿಕ್ ಮೀಟರ್ ಮರಳು ಸಂಗ್ರಹವಾಗಿರುವದು ಕಂಡು ಬರುತ್ತದೆ ಹಾಗೂ ಈ ಪ್ರದೇಶಕ್ಕೆ ಹೊಂದಿಕೊಂಡಂತೆ ನದಿಯ ಹೊರಗೆ ಆಗ್ನೇಯ (ಎಸ್‌ಡ್ಲೂ) ದಿಕ್ಕಿಗೆ ಕಾಲುವೆ ರಸ್ತೆಯ ಪಕ್ಕದಲ್ಲಿ ಖಾಸಗಿ ಜಮೀನದಲ್ಲಿ ಅಂದಾಜು 174 ಕ್ಯೂಬಿಕ್ ಮೀಟರ್ ಮರಳು ದಾಸ್ತಾನು ಮಾಡಿರುವದು ಕಂಡುಬಂದಿರುತ್ತದೆ ಎಂದು ಪಿಡಬ್ಲೂಡಿ ಅಧಿಕಾರಿಗಳು ಸ್ಥಳದಲ್ಲಿ ಅಂದಾಜಿಸಿ ತಿಳಿಸಿರುತ್ತಾರೆ. ಸದರಿ ದಾಸ್ತಾನು ಮಾಡಿರುವ ಜಮೀನು ಖಾಸಗಿ ಜಮೀನು ಆಗಿದ್ದು, ಸರ್ವೆ ನಂಬರ 39 ಆಗಿದ್ದು, ಇದು ಚಂದ್ರಕಾಂತಬಾಯಿ ಗಂಡ ಬಸಲಿಂಗಪ್ಪ ಸಿಂಪಿ [ಪಹಣಿಯಂತೆ] ರವರಿಗೆ ಸೇರಿರುವ ಜಮೀನು ಇರುತ್ತದೆ ಎಂದು ಸ್ಥಳದಲ್ಲಿ ಹಾಜರಿದ್ದ ಕಂದಾಯ ಇಲಾಖೆಯ ಸಿಬ್ಬಂದಿಯವರು ತಿಳಿಸಿರುತ್ತಾರೆ. ಸದರಿ ಎರಡು ಪ್ರದೇಶದಲ್ಲಿ ಅನಧೀಕೃತವಾಗಿ ದಾಸ್ತಾನು ಮಾಡಲಾದ ಮರಳನ್ನು ಸ್ಥಳ ಮಹಜರ ಮೂಲಕ ಹಾಗೂ ಇಲಾಖೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸರಕಾರಕ್ಕೆ ವಶಪಡಿಕೊಳ್ಳಲಾಗಿರುತ್ತದೆ. ಆದ್ದರಿಂದ ಮೇಲ್ಕಂಡ ಪಟ್ಟೆದಾರರಾದ ಚಂದ್ರಕಾಂತಾಬಾಯಿ ಗಂಡ ಬಸಲಿಂಗಪ್ಪ ಸಿಂಪಿ ರವರು ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಅನಧೀಕೃತವಾಗಿ ಕಳ್ಳತನದಿಂದ ಮರಳನ್ನು ಭೀಮಾನದಿ ಪಾತ್ರದಲ್ಲಿ ಮರಳು ಗಣಿಗಾರಿಕೆ ನಡೆಸಿ ತಮ್ಮ ಜಮೀನದಲ್ಲಿ ದಾಸ್ತಾನು ಮಾಡಿರುವದು ಕಂಡು ಬಂದಿದ್ದು, ಈ ಬಗ್ಗೆ ಶ್ರೀ ಚಿದಂಬರ ಕೆ. ಪಿ ತಂದೆ ಪರಶಿವಮೂರ್ತಿ ಭೂ ವಿಜ್ಞಾನಿ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ವಿಜಯಪೂರ ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 18.05.2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 5] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 60/2021 ಕಲಂ 15 (ಎ), 32 (3) ಕರ್ನಾಟಕ ಅಬಕಾರಿ ಕಾಯ್ದೆ – 1965

ದಿನಾಂಕ: 18/05/2021 ರಂದು 19:10 ಗಂಟೆಗೆ ಇದರಲ್ಲಿ ಆರೋಪಿತರಾದ ಪರಶುರಾಮ ತಂದೆ ಬಾಬು ಕೊಲಕಾರ ವಯಾ–32 ವರ್ಷ ಸಾ॥ಕಾಖಂಡಕಿ ತಾ॥ಬಬಲೇಶ್ವರ ಈತನು ಕಾಖಂಡಕಿ ಗ್ರಾಮದ ಬಿಳಿ ಮಸೀದಿ ಹತ್ತಿರ ಆರೋಪಿತನು ತನ್ನ ಬಾಬತ್ತ ಪಾನಶಾಪದಲ್ಲಿ, ಸರಕಾರದಿಂದ ಯಾವುದೇ ಅನುಮತಿ ವ ಪರವಾನಿಗೆ ಇಲ್ಲದೇ ಅನಧಿಕೃತವಾಗಿ ಜನರಿಗೆ ಸರಾಯಿ ಕುಡಿಯಲು ಅವಕಾಶ ಮಾಡಿಕೊಟ್ಟಾಗ 90 ಎಮ್.ಎಲ್‌ದ ಅಳತೆಯ ಓಲ್ಡ ಟವರೆನ ವಿಸ್ಕಿ ಅಂತಾ ಲೇಬಲ್ ಇದ್ದ 04 ಖಾಲಿ ಸರಾಯಿ ಟೆಟ್ರಾ ಪಾಕೀಟ್‌ಗಳು ಕಿಮ್ಮತ್ತು 00=00 ಸಿಕ್ಕಿದ್ದು, ಅಲ್ಲದೆ ಕುಡಿಯಲು ಬಳಿಸಿದ 04 ಪ್ಲಾಸ್ಟಿಕ್ ಗ್ಲಾಸಗಳು ಕಿಮ್ಮತ್ತು 00=00 ಸಿಕ್ಕಿದ್ದು, ಸದರಿ ಆರೋಪಿತನ ಮೇಲೆ ನಮ್ಮದು ಕಲಂ: 15 (೦), 32 (3) ಕರ್ನಾಟಕ ಅಬಕಾರಿ ಕಾಯ್ದೆ – 1965 ನೇದ್ದರ ಪ್ರಕಾರ ಸರಕಾರಿ ತರ್ಪೆ ಫಿರ್ಯಾದಿ ಇರುತ್ತದೆ ಅಂತಾ ವಗೈರೆ ಪಿರ್ಯಾದಿದಾರರ ಪಿರ್ಯಾದಿಯಲ್ಲಿ ನಮೂದ ಅದೆ. ಈ ಬಗ್ಗೆ ಶ್ರೀ ಸೋಮನಗೌಡ.ಬಿ.ಗೌಡ್ರ ಪಿ..ಎಸ್.ಐ ಬಬಲೇಶ್ವರ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 18.05.2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 6] ಎಪಿಎಮ್‌ಸಿ ಪೊಲೀಸ ಠಾಣೆ ಗುನ್ನಾ. ನಂ: 40/2021 ಕಲಂ 188, 269, 328, ಐ.ಪಿ.ಸಿ ಹಾಗೂ 32, 34 ಕರ್ನಾಟಕ ಅಬಕಾರಿ ಕಾಯ್ದೆ.

ದಿನಾಂಕ–18/05/2021. ರಂದು 10:00 ಗಂಟೆಗೆ ಇದರಲ್ಲಿ ಆರೋಪಿತನಾದ ವಾಸು @ ವಾಸುದೇವ ತಂದೆ ಮುಕಿಂದ ಸಾಳುಂಕೆ, ವಯಾ–23 ವರ್ಷ, ಉದ್ಯೋಗ ವೆಲ್ಡರ್, ಜಾತಿ ಹಿಂದೂ, ಸಾ॥ ಇಂಡಿ ರೋಡ ಬಂಬಳ ಅಗಸಿ ವಿಜಯಪುರ ಈತನು ವಿಜಯಪುರ ಇವನು ತಾನು ಮಾಸ್ಕನ್ನು ಹಾಕಿಕೊಳ್ಳದೆ ಹಾಗೂ ಸದರಿ ಕೋರೋನಾ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ತಿಳಿದು ತಿಳಿದು ತಾನು ಜನರಿಗೆ ತನ್ನ ಪಾಯ್ದೆಗೋಸ್ಕರ ಅನಧೀಕೃತವಾಗಿ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತಹ ರಾಸಾಯನದಿಂದ ಎಲ್ಲಿಯೋ ತಯಾರಿಸಿದ ಕಂಟ್ರಿ ಸಾರಾಯಿಯನ್ನು ಒಂದು ಪ್ಲಾಸ್ಟಿಕ್ ಕೊಡದಲ್ಲಿ ಹಾಕಿಕೊಂಡು ಬಂದು ಅದನ್ನು ವಿಜಯಪುರ ಶಹರದ ಇಂಡಿ ರಸ್ತೆಯ ಆಶ್ರಯ ಯೋಜನೆ ಮನೆಯ ಹಿಂದೆ ಖಾಲಿ ಜಾಗೆಯಲ್ಲಿ ಕುಳಿತು ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡು ಮಾರಾಟ ಮಾಡುತ್ತಾ ಕುಳಿತಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ ಸೋಮೇಶ ಗೆಜ್ಜಿ. ಪಿಎಸ್‌ಐ(ಕಾ&ಸು) ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.05.2021 ರಂದು ಎಪಿಎಮ್‌ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 7] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 127/2021 ಕಲಂ 188, 269, ಐಪಿಸಿ &32, 34 ಕರ್ನಾಟಕ ಅಬಕಾರಿ ಕಾಯ್ದೆ 1965

ದಿನಾಂಕ: 18–05–2021 ರಂದು 12–15 ಗಂಟೆಗೆ ಕುಮಟಗಿ ತಾಂಡಾದ ಪಲ್ಲವಿ ಹೊಟೇಲ್‌ದಲ್ಲಿ ಇದರಲ್ಲಿ ಆರೋಪಿತರಾದ 1] ಮಲ್ಲು ದೇವಲು ಚವ್ಹಾಣ 2] ಯಂಕು ದೇವಲು ಚವ್ಹಾಣ ಸಾ॥ ಕುಮಟಗಿ ತಾಂಡಾ ಇದರಲ್ಲಿ ಆರೋಪಿತರು ಕೋವಿಡ್ ಸಾಂಕ್ರಾಮಿಕ ರೋಗ ತಡೆಗಟ್ಟಲು ಮಾಡಿದ ಸರಕಾರದ ಆದೇಶಗಳನ್ನು ಉಲ್ಲಂಗನೆ ಮಾಡಿ ತಮ್ಮ ಹೊಟೇಲದಲ್ಲಿ ತನ್ನ ಪಾಯ್ದೇಗೋಸ್ಕರ ಸಂಬಂದಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುವಾಗ ಸಿಕ್ಕಿ ಬಿದ್ದಿದ್ದು ಇರುತ್ತದೆ. ಜಪ್ತಾದ ಮಾಲಿನ ವಿವವರ ಸದರಿಯವರಿಂದ 28792 ರೂ ಕಿಮ್ಮತ್ತಿನ 50 ಲೀಟರ 280 ಎಮ್ ಎಲ್ ಮದ್ಯವನ್ನು ಜಪ್ತ ಮಾಡಿದೆ, ಈ ಬಗ್ಗೆ ಸ॥ತ॥ ಶ್ರೀ ಆನಂದ ಟಕ್ಕಣ್ಣವರ ಪಿ ಎಸ್ ಐ ವಿಜಯಪೂರ ರೂರಲ್ ಪಿ ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.05.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.